ಚೌಕಟ್ಟುಗಳನ್ನು ಮೀರುವ ಹಂಬಲದ ದೇಹ ಮೀಮಾಂಸೆ



# ಲೋಕಚರಿತದ ಬೆನ್ನತ್ತಿ...

**ಸತ್ಯ ಮಿಥ್ಯೆಗಳ ನಡುವಿನ ಹಲವು ಸಾಧ್ಯತೆಗಳ ಕುರಿತು ಗಮನಸೆಳೆಯುವ ಸುರೇಖಾ ಅವರ ಕಲಾಕೃತಿಗಳು, ತಮ್ಮ ಸೂಕ್ಷ್ಮ ಒಳನೋಟಗಳಿಂದ, ಮುಟ್ಟಿದರೆ ಮಿಡಿಯುವ ಸ್ಪಂದನಗಳಿಂದ, ಸಹೃದಯರನ್ನು ಕಾಡುವ–ಕಂಗೆಡಿಸುವ ಗುಣ ಹೊಂದಿವೆ.**

**■ ಎಂ.ಎಸ್. ಆಶಾದೇವಿ**



ಹೂಗಳ ಮೆದೆಯೊಳಗೆ ದೇಹ–ಮನಸ್ಸು!

ಚಿತ್ರಕಲೆಯ ಹಲವು ಸಾಧ್ಯತೆಗಳನ್ನು ನಿರಂತರವಾಗಿ ಶೋಧಿಸುತ್ತಿರುವ ಪ್ರಯೋಗಶೀಲ ಕಲಾವಿದೆ ಸುರೇಖಾ. ಕಾಲು ಶತಮಾನದ ಅವರ ಜೊತೆಗಿನ ಒಡನಾಟದಲ್ಲಿ ನಾನು ಸದಾ ಬೆರಗಿನ ಮೆಚ್ಚುಗೆಯಲ್ಲಿ ಗಮನಿಸಿರುವುದೆಂದರೆ, ಬದುಕನ್ನು ಇಡಿಯಲ್ಲೂ ಬಿಡಿಯಲ್ಲೂ ಪ್ರತಿ ಗಳಿಗೆಯೂ ಆನಂದಿಸುವ, ಆರಾಧಿಸುವ ಉತ್ಸವದ ಮನಸ್ಥಿತಿಯನ್ನು. ಮರಗಳನ್ನೂ ಕಾಡನ್ನೂ ಒಟ್ಟಾಗಿ ಕಾಣುವ ‘ಕಲಾ ಕಣ್ಣು’, ಒಳಗಣ್ಣು ಇವರಲ್ಲಿ ಸದಾ ಜಾಗೃತವಾಗಿರುತ್ತದೆ.

ಬೆಂಗಳೂರಿನ ‘ಸುಮುಖ’ ಗ್ಯಾಲರಿಯಲ್ಲಿ ಸುರೇಖಾ ಅವರ ‘ಕಲಾ ಪ್ರದರ್ಶನ (ಜೂನ್ 24ರಿಂದ ಜುಲೈ 22ರವರೆಗೆ) ನಡೆಯುತ್ತಿದೆ. ಕಳೆದೊಂದು ದಶಕದಲ್ಲಿ ಅವರು ಸೃಷ್ಟಿಸಿದ ಹಲವು ಮಾಧ್ಯಮಗಳ ಕಲಾಕೃತಿಗಳ ಪ್ರದರ್ಶನ ಇದು. ಸಹಜವಾಗಿ ಹೆಣ್ಣು ಇವರ ಅಭಿವ್ಯಕ್ತಿಯ ಮೂಲವಸ್ತು. ಆದರೆ ಇವರ ನೋಟ–ನಿಲುವುಗಳು ತಮ್ಮ ಸೂಕ್ಷ್ಮತೆ, ಒಳನೋಟಗಳಿಂದ ನಮ್ಮನ್ನು ಸೆಳೆದು, ಬಾಚಿ ತಬ್ಬುವಂತೆ ಮಾಡುತ್ತವೆ. ಭಾವುಕತೆಯ ಆವರಣವನ್ನು ಆದಷ್ಟೂ ಪಕ್ಕಕ್ಕೆ ಸರಿಸುತ್ತಾ, ಹೆಣ್ಣಿನ ಸವಾಲುಗಳನ್ನು, ಅವಳ ನಾಜೂಕು ರೇಷ್ಮೆಯಲ್ಲಿ ಹಲವು ರವಿಕೆಗಳನ್ನು (ಬ್ಲೌಸ್) ಇವರು ಕೈಹೆಣಿಗೆಯಲ್ಲಿ ಹೊಲಿದಿದ್ದಾರೆ; ನೇಯ್ದಿದ್ದಾರೆ ಎನ್ನುವುದೇ ಹೆಚ್ಚು ಸರಿ. ಗಾಢ ಕೆಂಪು ಬಣ್ಣದ, ತಿಳಿಗೆಂಪು ಬಣ್ಣದ, ಕೆಲವು ಕಡೆ ಬಣ್ಣ ಹರಡಿಕೊಂಡಂತಿರುವ ಈ ರಚನೆಗಳು ಆಧುನಿಕ ಸ್ತ್ರೀವಾದಿ ಪರಿಭಾಷೆಯಲ್ಲಿ ಹೆಣ್ಣಿನ ಸ್ವರಚನೆಯ ತುಣುಕುಗಳಂತೆ ಕಾಣಿಸುತ್ತವೆ. ಆ ಕೆಂಪು ಬಣ್ಣ ಹೆಣ್ಣಿನ ಸೃಷ್ಟಿಶೀಲತೆಯ ಶಕ್ತಿಯನ್ನು (ಮುಟ್ಟಿನ ರಕ್ತ) ಸಂಕೇತಿಸುವಂತೆಯೇ ರಕ್ತ, ನೋವು, ಹಿಂಸೆಯ ಜೊತೆಗಿನ ಅವಳ ಬಿಡಿಸಲಾಗದ ಸಂಬಂಧವನ್ನೂ ಧ್ವನಿಸುತ್ತದೆ. ಈ ಎರಡರಷ್ಟೇ ಮುಖ್ಯವಾಗಿ ಹೆಣ್ಣಿನ ಕಲಾಸೃಷ್ಟಿಯ ಹುಟ್ಟುಗುಣವನ್ನೂ ಇವು ತಪ್ಪದೇ ನಮಗೆ ಮುಟ್ಟಿಸುತ್ತವೆ. ಇನ್ನೂ ವಾಚ್ಯವಾಗಿ ಹೇಳಬೇಕೆಂದರೆ, ಹೊಲಿಗೆಯ ಕಲೆಯನ್ನು ಲೋಕಕ್ಕೆ ಪರಿಚಯಿಸಿದವಳೂ ಹೆಣ್ಣೇ! ಈ ಕಲಾಕೃತಿಗಳನ್ನು ನೋಡುತ್ತಿದ್ದರೆ ರವಿಕೆಗೂ ಹೆಣ್ಣಿಗೂ ಇರುವ ಸಂಬಂಧವು ಇತಿಹಾಸದ ಯಾವೆಲ್ಲಾ ಬೀದಿಗಳಲ್ಲಿ ನಾವು ಹಾದು ಹೋಗುವಂತೆ ಮಾಡುತ್ತದೆ. ಹೆಣ್ಣು ಕೊಡಬೇಕಾದ ಸ್ತನದ ತೆರಿಗೆ, ಅವಳು ರವಿಕೆಯನ್ನೇ ಹಾಕಬಾರದೆನ್ನುವ ಬಹಿಷ್ಕಾರ, ಅಡಿಕೆ ಸುಲಿಯುವ ಮಲೆನಾಡಿನ ಕೂಲಿಕಾರ ಹೆಣ್ಣುಮಕ್ಕಳು ಆ ಕೆಲಸ ಮಾಡುವಾಗ ಕೈ ಆಡಿ ಆಡಿ ರವಿಕೆ ಬೇಗ ಸವೆಯುತ್ತದೆ